Doc-365
T.P-2

(1)

Reg No B G 155 4-9-1966

ಪ್ರಕಟಣೆ ಪರ್ಯಾಯನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

52 nd Year of Publication

ಮುದ್ರಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಜ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅ ಧಿ ಕಾ ರಿ ಗ ಳ ಬ ಹಿ ರಂ ಗ ತ ನಿ ಖೆ

ಸತ್ಯವಾದಿ " ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬಿಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾತವರು, ಶ್ರೀ ಎಂ. ಬಿ. ಬಸನಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನಾವು ಮಾತನಾಡುವದೆಷ್ಟು !

ನಾವು ದಿನದಲ್ಲಿ 16 ಗಂಟೆ ಎಚ್ಚರದಿಂದಿದ್ದರೆ, 3 ಗಂಟೆ 20 ನಿಮಿಷ ಮಾತನಾಡುವೆವೆಂದೂ, ನಿಮಿಷಕ್ಕೆ 150 ಮಾತುಗಳಂತೆ ಆಡುವೆವೆಂದೂ, ಅಂದರೆ ದಿನಕ್ಕೆ 30000 ಮಾತುಗಳನ್ನಾಡುವೆವೆಂದೂ ರಷ್ಯಾ ನಿಪುಣನೊಬ್ಬನ ಲೆಖ್ಖಾಚಾರ !

ಜನಸಂಖ್ಯೆ !

ಹ್ಯಾಂಬರ್ಗ್— ಈಗಿನ ದೀತಿಯಲ್ಲಿ ಜನಸಂಖ್ಯೆ ಹೆಚ್ಚಿದರೆ, 50 ವರ್ಷಗಳಲ್ಲಿ ವಿಶ್ವದ ಜನಸಂಖ್ಯೆ 4000 ಮಿಲಿಯನ್ನಕ್ಕೆ ಏರುವದೆಂದೂ, 2060 ರಲ್ಲಿ 30000 ಮಿಲಿಯವಾಗುವುದೆಂದೂ ಪ್ರೊ|| ಮಾರ್ಷಿಯಸ್ ಅಭಿಪ್ರಾಯಪಟ್ಟಿರುವರು.

ಭತ್ತದ ದಾಖಲಾತಿ ಬೆಳೆ

ಪೆರಿಡೇನಿಯಾ (ಸಿಲೋನ್)– 1967 ರಲ್ಲಿ ವಿಶ್ವಹಲ್ಲಿ 180 ಮಿಲಿಯನ್ ಟನ್ ಭತ್ತದ ಬೆಳೆ ಆಗಿದೆ– ಇಷರಲ್ಲಿ ಉತ್ತರ ಕೊರಿಯ, ಉತ್ತರ ವಿಯೆಟ್ನಾಮ್, ಮೇಲ್ಯಾಂಡ್ ಚೈನಾ ಸೇರಿಲ್ಲ ; ಅವುಗಳ ಅಕ್ಕಿ ರಫ್ತೀ 1 ಮಿಲಿಯ ಟನ್‌ಗೆ ಹೆಚ್ಚಿದೆ.

ವಶಪಡಿಸಿಕೊಂಡ ಅಕ್ಕಿ ಇತ್ಯಾದಿ

ಮಂಗಳೂರು— ಕಳೆದ 6 ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ಅಕ್ರಮ ಸಾಗಾಣಿಕೆಯಾಗುತ್ತಿದ್ದ ರೂ. 2 39 ಲಕ್ಷ ಬೆಲೆಯ 5 ಕ್ವಿಂಟಾಲು ಅಕ್ಕಿ, 2703 ಕ್ವಿಂಟಾಲು ಕುಸಬಲ ಅಕ್ಕಿ, 23 ಕ್ವಿಂಟಾಲು ಅಕ್ಕಿ ನುಚ್ಚು, 3 ಕ್ವಿಂಟಾಲು ಮಿಶ್ರೋ ವಶಪಡಿಸಿಕೊಳ್ಳಲಾಗಿದೆ ಎಂದು ಡೆಪ್ಯೂಟಿ ಕಮಿಷನರು ಹೇಳಿದರು.

ಸೆರವಿನ ನಿರೀಕ್ಷೆಯಿಲ್ಲ

ನವದೆಹಲಿ— ಆಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯಿಂ ಸಾಧಾರಣವಾಗಿ ಭಾರತವು ಪಡೆಯುವ 200 ಮಿಲಿಯ ಡಾಲರು ನೆರವು ಈ ವರ್ಷ ದೊರೆವ ನಿರೀಕ್ಷೆಯಿಲ್ಲ.

ಪಾಕಿಸ್ತಾನದ ಶಸ್ತ್ರಾಸ್ತ್ರ

ನವದೆಹಲಿ—ಅಮೇರಿಕವು-ಇಲ್ಲೀವರೆಗೆ ಪಾಕಿಸ್ತಾನಕ್ಕೆ 640 ಮಿಲಿಯ ಡಾಲರು ಮೌಲ್ಯದ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿರುವದಾಗಿ ಪಾಕಿಸ್ತಾನದಲ್ಲಿಯ ಅಮೇರಿಕಾ ರಾಯಭಾರಿ ಹೇಳಿರುವರು — ಇದು ಭಾರತಕ್ಕೆ ಸರಬರಾಜು ಮಾಡಿರುವುದಕ್ಕಿಂತ 6 ಪಟ್ಟು ಹೆಚ್ಚಾಗಿದೆ.

ಪಾಕಿಸ್ತಾನದ ದಬ್ಬಾಳಿಕೆ

ನವದೆಹಲಿ—ಫಕ್ರುದ್ದೀನರ ಮೇಲೆ ಪಾಕಿಸ್ತಾನ-ಸರಕಾರ ದಬ್ಬಾಳಿಕೆ ಕಾರ್ಯ ಆಚರಿಸುತ್ತಿರುವದಾಗಿ ಖಾನ್ ಅಬ್ದುಲ್ ಗಫಾರ್ ಖಾನ್ ಕಟುವಾಗಿ ಆಪಾದಿಸಿರುವರು.

ಕಮ್ಯೂನಿಸ್ಟ್ ಸ್ವಯಂಸೇವಕರು

ಬೊಂಬಾಯಿ— ಕಮ್ಯೂನಿಸ್ಟ್ ಪಾರ್ಟಿಯು ದೇಶದಾದ್ಯಂತ 'ಲೋಕಸೇವಾದಳ' ಸ್ವಯಂಸೇವಕ ಪಡೆ ಸ್ಥಾಪಿಸಲು ನಿರ್ಧರಿಸಿದೆ.

ಎಂತಹ ಸಾಮರ್ಥ್ಯ

ಜಕರ್ತ— ಇಂಡೋನೇಷಿಯಾದ ಪ್ರಖ್ಯಾತ ಕೈದೋಗಾರ 39 ವರ್ಷದ ವಿವಾಹಿತನೂ ಮತ್ತು ಇಬ್ಬರು ಮಕ್ಕಳ ತಂದೆಯೂ ಆದ ಬಂಡಾಟ್ ಲಾಹಡೋರ್, 1 ಲಕ್ಷ ಜನ ಸೇರಿದ್ದ ಫುಟ್‌ಬಾಲ್ ಸ್ಟೇಡಿಯಂನಲ್ಲಿ, ಅಲ್ಲಿ ಬಿಡಲಾಗಿದ್ದ ಮಹಾ ಕ್ರೂರವಾದ ಆಫ್ರಿಕಾ ಸಿಂಹದೊಡನೆ ಬರೀ ಕೈಲಿ ಹೋರಾಡಿ ಅದನ್ನು ಕೊಲ್ಲಲು ಪ್ರಯತ್ನ ಏರ್ಪಡಿಸಲಾಗಿತ್ತು.

★ ಲಕ್ನೊ—ಜಿಂಜಕ್ ಪೈಲ್ವೇ ಸ್ಟೇಷನ್ನಿನಲ್ಲಿ ಗುಡ್ಸ್ ರೈಲಿಗೆ ಸಿಕ್ಕಿ 6 ಮಂದಿ ಸತ್ತು ಒಬ್ಬ ಗಾಯಗೊಂಡನು.

ಕೇಂದ್ರ ಅಧಿಕಾರಿಗಳ ತನಿಖೆ

ನವದೆಹಲಿ— ಕೇಂದ್ರ ತನಿಖಾ ಇಲಾಖೆಯು ಜುಲೈ ತಿಂಗಳಿನಲ್ಲಿ 30 ಗೆಜಿಟೆಡ್ ಅಧಿಕಾರಿಗಳು ಮತ್ತಿತರ 158 ಸರಕಾರಿ ಉದ್ಯೋಗಿಗಳ ಬಗ್ಗೆ ಬಹಿರಂಗ ತನಿಖೆ ಆರಂಭಿಸಿದೆ.

ಗಡಿ ರಕ್ಷಣೆ

ನವದೆಹಲಿ— ಚೀನಾ ಪಾಕಿಸ್ತಾನಗಳ ಬೆಳವಣಿಕೆ ಇರುವುದರಿಂದ, ಭಾರತದ ರಕ್ಷಣಾ ಸಿದ್ಧತೆಯಲ್ಲಿ ಮೃದುತ್ವವಿಲ್ಲವೆಂದು ರಕ್ಷಣಾ ಮಂತ್ರಿಯವರು ಹೇಳಿದರು.

★

ಮೆಡಿಕಲ್ ಕಾಲೇಜು

ಬೆಂಗಳೂರು— ಇನ್ನು ಮೆಡಿಕಲ್ ಕಾಲೇಜುಗಳ ಸ್ಥಾಪನೆಗೆ ಸರಕಾರ ಅನುಮತಿ ಕೊಡುವದಿಲ್ಲವೆಂದು ಆರೋಗ್ಯಮಂತ್ರಿಗಳು ಹೇಳಿದರು.

★

ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆ

ಮೈಸೂರು— ದಸರಾ ಮಹೋತ್ಸವ ಮತ್ತು ಎಗ್ಜಿಬಿಷನ್ ಸಂದರ್ಭದಲ್ಲಿ ಪಾದಚಾರಿಗಳ ಓಡಾಟ ಬಹಳ ಹೆಚ್ಚಾಗಿರುವದರಿಂದ, ಸೆಪ್ಟಂಬರು 22 ರ ಬೆಳಿಗ್ಗೆ 8 ಗಂಟೆಯಿಂದ ಅಕ್ಟೋಬರು 3 ನೆ ಧ್ಯರಾತ್ರಿ 12 ಗಂಟೆವರೆಗೆ ಕೆಲವು ಮಾರ್ಗಗಳಲ್ಲಿ ಮೋಟಾರು ವಾಹನಗಳ ಓಟಾಟ ಬಗ್ಗೆ ನಿರ್ಬಂಧಿಸಿ ಜಿಲ್ಲಾ ಮಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

★ ಬೊಂಬಾಯಿ—1980 ರ ಮೈಸೂರು ಅಭಿವೃದ್ಧಿ ಸ್ಥಾಲವು ಪ್ರಕಟಿಸಿದ 24 ಗಂಟೆಗಳಲ್ಲಿ ಭರ್ತಿಯಾಯಿತು.



ಹಳುವಿನಿಂದ ಹೆಚ್ಚಾಗಿ ಹಾಲು ಪಡೆಯಲು ಹೀಗೆ

ಸುಮಾರು 300 ದಿನಗಳಲ್ಲಿ 2250 ಕಿಲೋ ಹಾಲು ಕೊಡುವಂತಹ ಹಸು ಪ್ರತಿನಿತ್ಯ ಸುಮಾರು 80 ಕಿಲೋ ಪ್ರೋಟೀನ್, 102 ಕಿಲೋ ಕೊಬ್ಬು, 109 ಕಿಲೋ ಲ್ಯಾಕ್ಟೋಸ್, 15 ಕಿಲೋ ಖನಿಜ ಪದಾರ್ಥಗಳು ಮತ್ತು ಉಳಿದುದನ್ನು ನೀರಿನ ರೂಪದಲ್ಲಿ ಒದಗಿಸುತ್ತದೆ. ಹಸುಹಾಲು ಕೊಡುವುದಲ್ಲದೆ ತನ್ನ ದೇಹವನ್ನು ಸರಿಯಾಗಿರಿಸಿಕೊಂಡು ಕರುಗಳನ್ನು ಕ್ಕೊಡಬೇಕು. ಇದಕ್ಕೋಸ್ಕರ ನಿಮ್ಮ ಹಸುವಿಗೆ ಸರಿಯಾಗಿ ಮೇವನ್ನು ಕೊಡಬೇಕು. ಹಣ ಉಳಿಸಬೇಕೆಂದು ಹಸುಗಳಿಗೆ ಸರಿಯಾಗಿ ಮೇವು ಕೊಡದಿದ್ದರೆ ಅವುಗಳ ಆರೋಗ್ಯ ಕೆಡುತ್ತದೆ. ಅವುಗಳಿಂದ ಬರುವ ಕರುಗಳು ಆರೋಗ್ಯವಾಗಿರುವುದಿಲ್ಲ. ಕೊನೆಯದಾಗಿ ಹಸುಗಳು ಸರಿಯಾಗಿ ಹಾಲು ಕೊಡಲಾರದು. ತಪ್ಪು ಆರೋಗ್ಯವನ್ನು ಕಾಪಾಡಿಕೊಂಡು, ಕರುಗಳನ್ನೂ ಕೊಟ್ಟು, ಸಾಕಷ್ಟು ಹಾಲು ಕೊಡಬೇಕಾದರೆ, ಹಸುಗಳಿಗೆ ಕೊಬ್ಬು, ಪ್ರೋಟೀನ್, ವಿಟಮಿನ್, ಖನಿಜ ಪದಾರ್ಥಗಳು ತರ್ಕಶಿಷ್ಟ ಇವೆಲ್ಲಾ ಇರುವಂತಹ ಮೇವನ್ನು ಸಾಕಷ್ಟು ಒದಗಿಸಬೇಕು. ಆದ್ದರಿಂದ ಇವೆಲ್ಲಾ ಇರುವಂತ ಮೇವನ್ನು ತಯ್ಯಾರಿಸಿ ಅದನ್ನು ಹಸುವಿನ ದೇಹದ ತೂಕ ಮತ್ತು ಅದು ಕೊಡುವ ಹಾಲಿನ ಪರಿಣಾಮಕ್ಕೆ ತಕ್ಕಂತೆ ಕೊಡಬೇಕು. [ಎಫ್.ಪಿ.]

ವುಡ್‌ಲಾಂಡ್ ಜನಪ್ರಿಯ 4 ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫಜ್ರ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ,
ಮುಕ್ರಿ, ಆಗಾ ಮುಂತಾದವರು

ಸಂಗೀತ —
ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ — 30-8-68 ರಿಂದ

ಚಿತ್ತಾಕರ್ಷಕ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ
ಪಾತ್ರ— ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

ದಸರಾ

ದಸರಾ ಮಹೋತ್ಸವವನ್ನು "ನಾಡ ಹಬ್ಬ" ವಾಗಿ ಆಚರಿಸಲು ಮೈಸೂರು ಸರಕಾರ ನಿರ್ಧರಿಸಿದೆ. ಅಕ್ಟೋಬರ್ 1ರಂದು, ಹಿಂದಿನ ವರ್ಷಗಳಂತೆ ಜಂಬೂಸವಾರಿಯು ನಡೆಯುವುದು. ಆಗ ಮಾರ್ಗದಲ್ಲಿ ಶ್ರೀಮನ್ಮಹಾರಾಜರವರಿಗೆ ಹಾರ ಅರ್ಪಿಸಲಿಚ್ಛಿಸುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಮೈಸೂರು ಮುನಿಸಿಪಾಲಿಟಿ ಕಮಿಷನರವರ ಅನುಮತಿ ಪಡೆಯಲು ತಾ|| 15 ನೇ ಸೆಪ್ಟೆಂಬರ್ ಒಳಗೆ ಅರ್ಜಿಹಾಕಬೇಕು.

Golden Jubilee of 'Satyavadi'

The golden jubilee of the 'Satyāvadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is wellknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Printing — Neat Binding

Lakshminarasimha Press

Swarampet, Mysore

ಆಶೋಕ ಔಷಧಾಲಯ

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ತಿಳಿಸಿ ಪತ್ರವ್ಯವಹಾರ

Help The Gorakshana

ಗೋವಧೆ ಕೂಡಲೆ ನಿಶೇಧವಾಗಲಿ

Protect the Cow

★

ಗೋರಕ್ಷಣೆ ಮೊದಲಾದ ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4